

# ಸೀಕ್ವಿನ್ ಮಿಂಚು!

ಮಿನುಗುವ ಚಮಕಿ ಹೊಂದಿರುವ ಸೀಕ್ವಿನ್ ಉಡುಗೆ ಈಗ ಟ್ರೆಂಡ್‌ನಲ್ಲಿದೆ. ಸಂಜೆಯ ಪಾರ್ಟಿಗೆ ಸೂಕ್ತವಾದ ಇಂಥ ಉಡುಗೆಯಲ್ಲಿ ನೀರೆ ಮಿಂಚಿನ ಸಂಚಲನ ಮೂಡಿಸುವುದು ವಿಶೇಷ.

■ ಕೆ.ವಿ. ರಾಜಲಕ್ಷ್ಮಿ

ಪಾರ್ಟಿಯೊಂದರಲ್ಲಿ ಆ ಯುವತಿ ಎಲ್ಲರ ಆಕರ್ಷಣೆಯ ಬಿಂದುವಾಗಿದ್ದಳು. ಆಕೆ ಉಟ್ಟಿದ್ದ ಸೀರೆ ಅವಳ ಸೌಂದರ್ಯಕ್ಕೆ ಪೈಪೋಟಿ ನೀಡುವಂತೆ ಮಿನುಗುತಿತ್ತು. ಆಕೆಯ ನಡಿಗೆಗೆ ತಕ್ಕಂತೆ ಸೀರೆಯಲ್ಲಿ ಮಿಂಚಿನ ಸಂಚಲನ! ಯಾವುದೀ ಸೆಳೆತ ಎಂಬ ಎಲ್ಲರ ಕುತೂಹಲಕ್ಕೊಂದು ತೆರೆ ಬಿದ್ದಿದ್ದು ಅವಳು ಉಟ್ಟ ಸೀರೆ ಸೀಕ್ವಿನ್ (Sequin) ಮಾದರಿ ಉಡುಗೆ ಎಂದು ತಿಳಿದ ಮೇಲೆ!

## ಏನಿದು ಸೀಕ್ವಿನ್ ಮೆಟೀರಿಯಲ್?

ಪ್ಲಾಸ್ಟಿಕ್ ಮತ್ತು ತೆಳು ಲೋಹದಿಂದ ತಯಾರಾದ, ಚಮಕಿ ಎಂದೂ ಕರೆಯಲ್ಪಡುವ ರಿಫ್ಲೆಕ್ಟಿವ್ ಕೋಟಿಂಗ್ ಉಳ್ಳ ಬಿಲ್ಲೆಗಳು ಈ ಮಿನುಗು ಬೊಟ್ಟು, ಗುಂಡಗೆ, ತೆಳ್ಳಗೆ ಇರುತ್ತವೆ. ಫಳಫಳನೆ ಹೊಳೆಯುವ ಈ ಚಮಕಿ ಎಲ್ಲ ಬಣ್ಣಗಳಲ್ಲೂ ದೊರೆಯುತ್ತದೆ. ಇವುಗಳನ್ನು ಬಟ್ಟೆಗೆ ಹೊಂದಿಸಿ ಮೂಲ ಬಟ್ಟೆಗೆ ಹೊಸ ರೂಪ ಕೊಡುವುದರೊಂದಿಗೆ ಸೀಕ್ವಿನ್ ಬಟ್ಟೆ ಸಿದ್ಧವಾಗುತ್ತದೆ. ಇಡೀ ಸೀರೆ, ಡ್ರೆಸ್ ಚಮಕಿಗಳಿಂದ ವಿವಿಧ ಡಿಸೈನ್‌ಗಳಲ್ಲಿ ಸಮೃದ್ಧಗೊಳಿಸುವುದು ಒಂದು ಕಡೆಯಾದರೆ ಕೇವಲ ಅಂಚು ಮತ್ತು ಸೆರಗಿಗೆ ಸೀಕ್ವಿನ್‌ನಿಂದ ಮೆರುಗುಗೊಳಿಸುವುದು ಇನ್ನೊಂದು ಬಗೆ. ಸೀಕ್ವಿನ್ ಇರುವ ಜಾಗದಲ್ಲಿ ಮೃದುವಾಗಿ ಸ್ಪರ್ಶಿಸಿದರೆ ಚಮ್ಕಿಯ ಎರಡೂ ಕಡೆ ಕ್ರಮವಾಗಿ ಹೊಳೆಯುವುದು ವಿಶೇಷ.

ಸೀರೆಗಳನ್ನು ಹೊರತುಪಡಿಸಿ ಸಾಂಪ್ರದಾಯಿಕ ಉಡುಗೆಗಳಾದ ಲೆಹೆಂಗಾ, ಚೋಲಿ, ಕುರ್ತಾ, ಶೇರ್ವಾನಿ ಅಥವಾ ಆಧುನಿಕ ಉಡುಗೆಗಳಾದ ಪ್ಯಾಂಟ್, ಜೀನ್ಸ್, ಸ್ಕರ್ಟ್, ಪಾರ್ಟಿ ಗೌನ್, ಮ್ಯಾಕ್ಸಿ ಡ್ರೆಸ್, ಶ್ರಗ್, ಸ್ಟೋಲ್, ಟ್ಯುನಿಕ್ಸ್, ಬ್ಲೇಜರ್‌ಗಳಲ್ಲೂ ಈ ಚಮತ್ಕಾರಿ ಸೀಕ್ವಿನ್ ಡಿಸೈನ್‌ಗಳನ್ನು ಕಾಣಬಹುದು. ಚಳಿ ತಡೆಯುವ ಸ್ವೆಟರ್, ಶಾಲ್‌ಗಳಿಗೂ ಸೀಕ್ವಿನ್ ಸೊಬಗು ನೀಡುತ್ತದೆ.

## ಮಕ್ಕಳ ಉಡುಗೆಗಳು

ಸೀಕ್ವೆನ್ಸ್ ವಿನ್ಯಾಸದ ಡಂಗ್ರಿ, ಲೆಗ್ಗಿನ್ಸ್, ಟೀ ಶರ್ಟ್, ಸ್ಕರ್ಟ್, ಶಾರ್ಟ್ಸ್‌ಗಳಲ್ಲಿ ಪುಟಾಣಿಗಳು ಎಂದಿಗಿಂತ ಕ್ಯೂಟ್ ಆಗಿ ಕಾಣುವುದರಲ್ಲಿ ಎರಡು ಮಾತಿಲ್ಲ.

## ಅಡಿಯಿಂದ ಮುಡಿಯವರೆಗೆ...

ಈ ಸೀಕ್ವಿನ್ ಮೆರುಗು ಬರೀ ಉಡುಗೆಗೆ ಮಾತ್ರವಲ್ಲದೆ ಬಗೆ ಬಗೆ ಆ್ಯಕ್ಸೆಸರಿ ರೂಪದಲ್ಲೂ ಕಾಣಬಹುದು. ಸಾರೀ ಬೆಲ್ಟ್, ಬ್ರೇಸ್ಲೆಟ್, ತಲೆಗೂದಲಿಗೆ ಒಪ್ಪುವ ಬ್ರೋಚ್, ಹೇರ್ ಬ್ಯಾಂಡ್, ಕೊರಳನ್ನಪ್ಪುವ ಚೋಕರ್, ಪೊಂಚೋ, ಹ್ಯಾಂಡ್ ಬ್ಯಾಗ್, ಕ್ಲಚ್, ಕೊನೆಗೆ ಚಪ್ಪಲಿ, ಸ್ಲಿಪ್ ಆನ್, ಶೂ, ಪಾರ್ಟಿವೇರ್... ಹೀಗೆ ಅಡಿಯಿಂದ ಮುಡಿಯವರೆಗೆ ಮಿನುಗಿನದೇ ಹವಾ!

## ಗೃಹಾಲಂಕಾರಕ್ಕೂ ಸೈ!

ಸೀಕ್ವಿನ್ ಮೆಟೀರಿಯಲ್‌ನಿಂದ ತಯಾರಾದ ವಾಲ್ ಬ್ಯಾಕ್ ಡ್ರಾಪ್, ಕರ್ಟನ್, ಕುಶನ್ ಕವರ್, ಸೋಫಾ ಥ್ರೋಸ್, ಕಾರ್ಪೆಟ್, ಪಿಲ್ಲೋ ಕವರ್, ಹೊದೆಯುವ ಬ್ಲಾಂಕೆಟ್ ಗೃಹಾಲಂಕಾರಕ್ಕೂ ಸಾಥ್ ನೀಡುತ್ತದೆ.

ಈ ಉಡುಗೆಗಳ ನಿರ್ವಹಣೆಯ ವಿಚಾರಕ್ಕೆ ಬಂದಾಗ ಅತಿ ಕಾಳಜಿ ಮುಖ್ಯ. ಹ್ಯಾಂಡ್ ವಾಶ್‌ಗೆ ಬದಲಾಗಿ ಕೇವಲ ಏರ್ ಡ್ರೈ ಅಥವಾ ಡ್ರೈ ವಾಶ್ ಮೂಲಕ ಬಹುಕಾಲ ಮಿನುಗು ಮಾಸದಂತೆ ಕಾಪಾಡಿಕೊಳ್ಳಬಹುದು. ■